ಇದಲ್ಲದೆ, ಈ ಕೆಳಕಂಡ ವಿವಿಧ ವಿದ್ಯಾರ್ಥಿವೇತನಗಳು ಮತ್ತು ಪ್ರೋತ್ಸಾಹಕ ಯೋಜನೆಗಳನ್ನು ಇಲಾಖೆಯು ಜಾರಿಗೊಳಿಸುತ್ತಿದೆ.

ಯೋಜನೆ	ಪ್ರಯೋಜನ ಪಡೆದವರ ಸಂಖ್ಯೆ.
೧) ಮೆಟ್ರಿಕ್‌ಪೂರ್ವ ವಿದ್ಯಾರ್ಥಿವೇತನ	೧೨ ೫೬೭
೨) ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ	೧,೪೪೬
೩) ಅರ್ಹತಾ ವಿದ್ಯಾರ್ಥಿವೇತನ	೬೪೯
೪) ಅನೈರ್ಮಲ್ಯ ವೃತ್ತಿಯಲ್ಲಿರುವವರ ಮಕ್ಕಳಿಗೆ ವಿದ್ಯಾರ್ಥಿವೇತನ	೭
೫) ಎಸ್. ಎಸ್. ಎಲ್. ಸಿ. ಪ್ರಥಮ ದರ್ಜೆ ವಿದ್ಯಾರ್ಥಿಗಳಿಗೆ ಬಹುಮಾನ	೩೫
೬) ಕಾಲೇಜು ವಿದ್ಯಾರ್ಥಿಗಳಿಗೆ ಬಹುಮಾನ	೨೨
೭) ಆರ್ಥಿಕ ಸೌಲಭ್ಯಗಳು	೧೧೦
೮) ಅಂತರ ಜಾತಿ ವಿವಾಹಿತ ದಂಪತಿಗಳಿಗೆ ಬಹುಮಾನ	೧೫

ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಲ್ಲಿ ಪ್ರಯೋಜನವಾದ ಕುಟುಂಬಗಳ ವಿವರ ಕೆಳಕಂಡಿಂತಿದೆ.

ವರ್ಷ	ವಿಶೇಷ ಘಟಕ ಯೋಜನೆ	ಗಿರಿಜನ ಉಪ ಯೋಜನೆ
೧೯೮೫-೮೬	೫೭೮೩	೪೨೮೪
೧೯೮೬-೮೭	೩೬೫೮	೩೦೫೦
೧೯೮೭-೮೮	೨೬೮೬	೨೯೯೩

ದಕ್ಷಿಣ ಕನ್ನಡ ಬೀಡಿ ಕಾರ್ಮಿಕರ ಬಗ್ಗೆ.

೧೭೧೧. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಬೀಡಿ ಕಾರ್ಮಿಕರು, ಬೀಡಿ ಮಾಲೀಕರು, ಬೀಡಿ ಗುತ್ತಿಗೆದಾರರ ಸಂಖ್ಯೆ ಎಷ್ಟು ?

೨) ದಕ್ಷಿಣ ಕನ್ನಡ ಬೀಡಿ ಕಾರ್ಮಿಕರಿಗೆ ಕೇರಳದಂತೆ ಸಾವಿರ ಬೀಡಿಗೆ ೧೫,೦೦ ರೂ. ಮಜೂರಿ ಕೊಡಲು ಎಂದಿನಿಂದ ಜಾರಿಗೊಳಿಸಲಾಗುವುದು ?

೩) ಬೀಡಿ ಗುತ್ತಿಗೆದಾರರಿಗೆ ಕಾರ್ಮಿಕರಿಗೆ ಕೊಡುವ ಎಲ್ಲಾ ಸವಲತ್ತುಗಳನ್ನು ಕೊಡಲಾಗುತ್ತಿದೆಯೇ ?

೪) ಬೀಡಿ ಕಾರ್ಮಿಕರಿಗೆ ವಸತಿಗಾಗಿ ಮನೆಗಳನ್ನು ಕಟ್ಟಿಸಿಕೊಡುವ ಯೋಜನೆ ಈಗ ಯಾವ ಹಂತದಲ್ಲಿದೆ ?

ಶ್ರೀ ಎಸ್. ಕೆ. ಕಾಂತ (ಕಾರ್ಮಿಕ ಸಚಿವರು).—

೧) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಅ) ಬೀಡಿ ಕಾರ್ಮಿಕರ ಸಂಖ್ಯೆ : ೩,೧೬,೯೬೫
ಆ) ಬೀಡಿ ಮಾಲೀಕರ ಸಂಖ್ಯೆ : ೧,೨೪೦
ಇ) ಬೀಡಿ ಗುತ್ತಿಗೆದಾರರ ಸಂಖ್ಯೆ : ೩ ೭೦೦

೨) ಎಲ್ಲ ಬೀಡಿ ಕಾರ್ಮಿಕರಿಗೆ ಈಗ ಇರುವ ಕನಿಷ್ಠ ವೇತನವನ್ನು ಪರಿಷ್ಕರಿಸಲು ಕರಡು ಅಧಿಸೂಚನೆಯೊಂದನ್ನು ಹೊರಡಿಸುವ ವಿಚಾರವು ಪರಿಶೀಲನೆಯಲ್ಲಿದೆ.

೩) ಬೀಡಿ ಗುತ್ತಿಗೆದಾರರು ಕಾರ್ಮಿಕರ ಸಂಘಕ್ಕೆ ಸೇರುವುದಿಲ್ಲ. ಆದುದರಿಂದ ಅವರಿಗೆ ಕಾರ್ಮಿಕರಿಗೆ ಕೊಡುವ ಸವಲತ್ತುಗಳನ್ನು ದೊರಕಿಸಿಕೊಡಲು ಬರುವುದಿಲ್ಲ. ಹಾಗೂ ಬೀಡಿ ಉದ್ದಿಮೆಯಲ್ಲಿ ಜಾರಿಯಲ್ಲಿರುವ ಗುತ್ತಿಗೆ ಪದ್ಧತಿಯನ್ನು ಸರ್ಕಾರ ಇಷ್ಟರಲ್ಲೇ ನಿಷೇಧಿಸಲು ಕ್ರಮ ತೆಗೆದುಕೊಳ್ಳುತ್ತಿದೆ.

೪) ಈ ಯೋಜನೆಯು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ಕೇಂದ್ರ ಕಲ್ಯಾಣ ಆಯುಕ್ತರಲ್ಲಿ ಲಭ್ಯವಿರುವ ಮಾಹಿತಿಯಂತೆ ಸದರಿ ಯೋಜನೆಯಡಿಯಲ್ಲಿ ಗರ್ಗೇಶ್ವರಿ, ಗುಂಡ್ಲುಪೇಟೆ, ಬೆಳಗಾಂ, ಬಳ್ಳಾರಿ, ಮಂಗಳೂರು, ಜಮಖಂಡಿ, ದಾವಣಗೆರೆ ಮತ್ತು ಮೈಸೂರಿನಲ್ಲಿ ಮನೆಕಟ್ಟುವ ಯೋಜನೆ ಇರುತ್ತದೆ: ಮೈಸೂರು ಜಿಲ್ಲೆಯ ಚಾಮುಂಡಿ ನಗರದಲ್ಲಿ ೪೨೫ ಮನೆಗಳನ್ನು ಕಟ್ಟಲಾಗಿದೆ.

ಬೇಲೂರು ಚನ್ನಕೇಶವ ದೇವಸ್ಥಾನದ ಸಂಸ್ಥೆಗೆ ಮಂಜೂರಾತಿ ನೀಡಿದ ಹಣ.

೧೪೫೫. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಧಾರ್ಮಿಕ ಹಾಗೂ ದತ್ತಿ ಮಂತ್ರಿ ನಿಯಂತ್ರಿತ ಮಾರುಕಟ್ಟೆ ಹಾಗೂ ಖಿಸ್ಕಿ ಜವಿಾನು ಅಭಿವೃದ್ಧಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೇಲೂರು ಚನ್ನಕೇಶವ ದೇವಸ್ಥಾನದ ವಾರ್ಷಿಕ ಆದಾಯವೆಷ್ಟು ? ಹಾಗೂ ಸದರಿ ದೇವಸ್ಥಾನಕ್ಕೆ ಸರ್ಕಾರದವರು ನೀಡುತ್ತಿರುವ ಅನುದಾನ ವೆಷ್ಟು ?

ಆ) ಕಳೆದ ಮೂರು ವರ್ಷಗಳಿಂದ ಆದಾಯದ ಹಾಗೂ ಖರ್ಚಿನ ವಿವರ ಒದಗಿಸುವುದು ?

ಇ) ಸದರಿ ದೇವಸ್ಥಾನದ ಕಟ್ಟಡಗಳು ಶಿಥಿಲಗೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ದುರಸ್ತಿ ಕಾರ್ಯದ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ಹಾಗೂ ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀ ಕೆ. ಅಮರನಾಥಶೆಟ್ಟಿ (ಧಾರ್ಮಿಕ ಹಾಗೂ ದತ್ತಿ ಮತ್ತು ನಿಯಂತ್ರಿತ ಮಾರುಕಟ್ಟೆ ಹಾಗೂ ಖಿಸ್ಕಿ ಜವಿಾನು ಅಭಿವೃದ್ಧಿ ರಾಜ್ಯ ಮಂತ್ರಿಗಳು).—

ಅ) ವಾರ್ಷಿಕ ಆದಾಯ ರೂ. ೧,೨೪,೬೯–೦೦ ಇರುತ್ತದೆ. ಹಿಂದಿನ ೩ ವರ್ಷಗಳಲ್ಲಿ ಸರ್ಕಾರದಿಂದ ಯಾವುದೇ ಅನುದಾನವನ್ನು ಕೊಟ್ಟಿರುವುದಿಲ್ಲ.

ಆ) ವರ್ಷ	ಆದಾಯ	ಖರ್ಚು
೧೯೮೫–೮೬	೧,೧೫,೨೦೮–೦೦	೧ ೦೪,೧೪೧–೦೦
೧೯೮೬–೮೭	೧,೧೨,೧೯೫–೦೦	೧,೦೪,೧೪೧–೦೦
೧೯೮೭–೮೮	೧ ೩೫,೪೯೫–೦೦	೧,೦೪,೧೪೧–೦೦

ಇ) ದೇವಸ್ಥಾನದ ಕಟ್ಟಡವು ಉತ್ತಮ ಸ್ಥಿತಿಯಲ್ಲಿದೆ ಆದರೆ ಅಲ್ಲಿ ಸಣ್ಣ ಪುಟ್ಟ ದುರಸ್ತಿ ಕಾರ್ಯ ಮಾಡಬೇಕಾಗಿದೆ.

ಈ) ಈ ಕಟ್ಟಡ ಪ್ರಾಚ್ಯ ವಸ್ತು ಇಲಾಖೆಯ ಅಡಳಿತಕ್ಕೊಳಪಟ್ಟಿದೆ. ಕಟ್ಟಡದ ದುರಸ್ತಿಗಾಗಿ ಬೇಲೂರು ತಹಶೀಲ್ದಾರರು ಪ್ರಾಚ್ಯವಸ್ತು ಇಲಾಖೆಯವರನ್ನು ಪತ್ರ ಬರೆದು ಕೋರಿರುತ್ತಾರೆ.